ಇ) ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಎಷ್ಟು ಹೊಸ ಬ್ರಾಂದಿ ಅಂಗಡಿಗೆ ಪರವಾನಗಿ ನೀಡಲಾಗಿದೆ ಕೊಡಗು ಜಿಲ್ಲೆಯಲ್ಲಿ ಎಷ್ಟು ಅಂಗಡಿ ಪರವಾನಗಿ ನೀಡಲಾಗಿದೆ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬಂದಿರುವ ಹಣವೆಷ್ಟು; ಬಾಕಿ ಎಷ್ಟು ಇದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) 2002-03ನೇ ಸಾಲಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಹರಾಜಿನಿಂದ ಮಾಹೆಯಾನ ರೂ. 71.74 ಕೋಟಿ ಗಳ ಸಾರಾಯಿ ಬಾಡಿಗೆ ನಿಗದಿಯಾಗಿರುತ್ತದೆ. ಸಾರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಅವಧಿ ಜೂನ್ 2003ಕ್ಕೆ ಅಂತ್ಯಗೊಳ್ಳುವುದರಿಂದ ಬಾಕಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಉದ್ಭವಿಸುವುದಿಲ್ಲ.

ಆ) 2002-03ನೇ ಆರ್ಥಿಕ ವರ್ಷದಲ್ಲಿ ನವೆಂಬರ್ ಅಂತ್ಯದವರೆಗೆ ಕೊಡಗು ಜಿಲ್ಲೆಯಿಂದ ಒಟ್ಟು 22.19 ಕೋಟಿ ರೂ.ಗಳು ಸಂಗ್ರಹಣೆಯಾಗಿರುತ್ತದೆ. ಪ್ರಸ್ತುತ ಆರ್ಥಿಕ ವರ್ಷ ಮಾರ್ಚ್ 31, 2003 ಕ್ಕೆ ಅಂತ್ಯಗೊಳ್ಳುವುದರಿಂದ ಬಾಕಿ ವಸೂಲಾತಿ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಸಾಲಿನಲ್ಲಿ ಯಾವುದೇ ಬ್ರಾಂದಿ ಅಂಗಡಿಗೆ ಹೊಸದಾಗಿ ಪರವಾನಗಿಯನ್ನು ನೀಡಿರುವುದಿಲ್ಲ.

ಉದ್ಭವಿಸುವುದಿಲ್ಲ.

ತೀರ್ಥಹಳ್ಳಿಯಲ್ಲಿ ಮುನ್ಸಿಫ್ ನ್ಯಾಯಾಧೀಶರಿಗೆ ವಸತಿ

2023 (2527) - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ಮುನ್ಸೀಫ್ ನ್ಯಾಯಾಧೀಶರಿಗೆ ವಸತಿ ಗೃಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ವಸತಿಗೃಹ ನಿರ್ಮಿಸಲು ಈ ಸಾಲಿನ ಮುಂಗಡ ಪತ್ರದಲ್ಲಿ ಹಣ ನಿಗಧಿ ಪಡಿಸಿದೆಯೇ?

ಇ) ಇಲ್ಲವಾದಲ್ಲಿ ಯಾವಾಗ ಹಣ ನಿಗಧಿ ಮಾಡಲಾಗುವುದು?

ಶ್ರೀ ಡಿ.ಬಿ. ಚಂದ್ರೇಗೌಡ, (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಇಲಾಖೆ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಮುಂದಿನ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಲು ಪರಿಶೀಲಿಸಲಾಗುತ್ತಿದೆ.

ವಾಣಿಜ್ಯ ತೆರಿಗೆ ಸಂಗ್ರಹಣೆ

2024 (2528) - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?